ಕಲ್ಲು ಗಣಿಗಾರಿಕೆ

2003 (2571); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ರಾಜ್ಯದಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿರುವ ಕಾರ್ಮಿಕರು ಎಷ್ಟು; (ವಿವರ ನೀಡುವುದು)

ಆ) ಕಲ್ಲು ಗಣಿಗಾರಿಕೆಯ ಕೆಲಸದಲ್ಲಿ ತೊಡಗಿರುವವರಿಗೆ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ; (ವಿವರ ನೀಡುವುದು)

ಇ) ಈ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಸರ್ಕಾರದಿಂದ ಅಥವಾ ಖಾಸಗಿ ಸಂಸ್ಥೆಗಳಿಂದ ನೀಡಲಾಗುತ್ತಿದೆಯೇ? (ವಿವರ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಬೀದರ ಜಿಲ್ಲೆಯಲ್ಲಿ ಕೆಂಪು ಕಲ್ಲಿನ ಹಾಗೂ ಕಪ್ಪು ಕಲ್ಲಿನ ಗಣಿಗಳಲ್ಲಿ ಒಟ್ಟಾರೆ 1,350 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಆ)

I. ಕಲ್ಲು ಗಣಿಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಪ್ರತ್ಯೇಕವಾಗಿ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಕಲ್ಲು ಪುಡಿ ಮಾಡುವ ಕಾರ್ಮಿಕರನ್ನು ಸಹ ಕಟ್ಟಡ ಕಾರ್ಮಿಕರೆಂದು ಪರಿಗಣಿಸಲಾಗಿದೆ. ಹೀಗಾಗಿ ಕಲ್ಲು ಪುಡಿ ಮಾಡುವ ನೋಂದಾಯಿತ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡಲಾಗುತ್ತಿರುವ ಈ ಕೆಳಕಂಡ 12 ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

ನೋಂದಾಯಿಸಿದ ತಕ್ಷಣ ದೊರೆಯುವ ಸೌಲಭ್ಯಗಳು:

1. ಒಳರೋಗಿ ಧನಸಹಾಯ
2. ಅಪಘಾತ/ದುರ್ಬಲತೆ ಪರಿಹಾರ
3. ಪ್ರಮುಖ ಖಾಯಿಲೆಗಳ ಧನಸಹಾಯ
4. ಅಂತ್ಯ ಕ್ರಿಯೆಗಾಗಿ ಧನಸಹಾಯ
5. ದುರ್ಬಲತೆ ಮಾಸಿಕ ಪಿಂಚಣಿ
6. ನೋಂದಾಯಿತರಲ್ಲದ ಕಾರ್ಮಿಕರಿಗೆ ಅನುಗ್ರಹರಾಶಿ ಪರಿಹಾರ

ನೋಂದಾಯಿಸಿ ಒಂದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ

7. ಹೆರಿಗೆ ಧನಸಹಾಯ
8. ಶೈಕ್ಷಣಿಕ ಧನಸಹಾಯ
9. ಮದುವೆ ಧನಸಹಾಯ

ನೋಂದಾಯಿಸಿ ಎರಡು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ

10. ಉಪಕರಣ ಧನಸಹಾಯ

ನೋಂದಾಯಿಸಿ ಐದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ

11. ಪಿಂಚಣಿ
12. ಮನೆ ಕಟ್ಟುವುದಕ್ಕೆ/ಖರೀದಿಸುವುದಕ್ಕೆ ಸಾಲ.

II. ಈ ಕಲ್ಲು ಗಣಿ ಕಾರ್ಮಿಕರು ರಾಜ್ಯ ಬಿಪಿಎಲ್ ಪಟ್ಟಿಯಲ್ಲಿ ಇದ್ದಲ್ಲಿ ಅಂತಹವರನ್ನು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದೆ. ಈ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಪಡೆದುಕೊಂಡಿರುವ ಕುಟುಂಬಗಳು ವಾರ್ಷಿಕ ₹ 30,000/–ಗಳವರೆಗಿನ ಒಳರೋಗಿ

ಚಿಕಿತ್ಸೆಯನ್ನು ಉಚಿತವಾಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಪಡೆಯಬಹುದಾಗಿದೆ.

III. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ವಿವಿಧ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಲು ಇದುವರೆಗೆ 43 ಕಾರ್ಮಿಕ ವರ್ಗಗಳನ್ನು ಗುರ್ತಿಸಿದ್ದು, ಅದರಲ್ಲಿ ಕಲ್ಲು ಒಡೆಯುವ ಕಾರ್ಮಿಕರು ಸಹ ಒಂದು ವರ್ಗವಾಗಿದೆ. ಈ ಕಾರ್ಮಿಕರಿಗೆ ಎನ್‌ಪಿಎಸ್ ಲೈಟ್ ಸ್ವಾವಲಂಬನ್ ಪಿಂಚಣಿ ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಿದ್ದು, ವಾರ್ಷಿಕ ₹ 1,200/–ಗಳ ವಂತಿಕೆಯನ್ನು ಪಾವತಿಸುವ ವಂತಿಕೆದಾರರು ಕೇಂದ್ರ ಸರ್ಕಾರದಿಂದ ಗರಿಷ್ಠ ₹ 1,000/–ಗಳ ಮತ್ತು ರಾಜ್ಯ ಸರ್ಕಾರದಿಂದ ಗರಿಷ್ಠ ₹ 1,200/–ಗಳ ಸಮಾನಾಂತರ ವಂತಿಕೆಯನ್ನು ಪಡೆಯಲು ಅರ್ಹರಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಂತಿಕೆದಾರರು ಅವರು ಪಾವತಿಸುವ ವಂತಿಕೆಯ ಎರಡರಷ್ಟು ಸಮಾನಾಂತರ ವಂತಿಕೆಯನ್ನು ಗರಿಷ್ಠ ₹ 2,400ಗಳಿಗೆ ಒಳಪಟ್ಟಂತೆ ರಾಜ್ಯಸರ್ಕಾರದಿಂದ ಪಡೆಯಬಹುದಾಗಿರುತ್ತದೆ. ವಂತಿಕೆದಾರರು 60 ವರ್ಷ ಪೂರೈಸಿದ ನಂತರದಲ್ಲಿ ತಮ್ಮ ಖಾತೆಯಲ್ಲಿ ಸಂಗ್ರಹವಾದ ಒಟ್ಟು ಮೊತ್ತದ ಶೇಕಡ 60 ರಷ್ಟನ್ನು ಹಿಂಪಡೆಯಬಹುದಾಗಿದ್ದು, ಉಳಿದ ಶೇಕಡ 40 ರಷ್ಟು ಹಣದ ಆಧಾರದ ಮೇಲೆ ಮಾಸಿಕ ಪಿಂಚಣಿ ಪಡೆಯಬಹುದಾಗಿರುತ್ತದೆ.

IV. ಕಲ್ಲು ಪುಡಿ ಮಾಡುವ ಮತ್ತು ಕಲ್ಲು ಒಡೆಯುವ ಉದ್ಯಮವನ್ನು ಕನಿಷ್ಠ ವೇತನ ಕಾಯ್ದೆ, 1948 ರಡಿ ಇರುವ ಅನುಸೂಚಿಗೆ ಸೇರಿಸಲಾಗಿದ್ದು, ಈ ಉದ್ಯಮದಲ್ಲಿ ಕೆಲಸ

ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಿದ್ದು, ಕಾಲಕಾಲದಿಂದ ಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ.

ಇ)

1. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಲ್ಯಾಣ ಸೌಲಭ್ಯಗಳನ್ನು ನೀಡಲಾಗುತ್ತಿದೆ.
2. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಹೊಂದಿರುವ ಫಲಾನುಭವಿಗಳು ನೋಂದಾಯಿತ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ₹ 30,000/–ಗಳವರೆಗಿನ ಒಳರೋಗಿ ಚಿಕಿತ್ಸೆಯನ್ನು ಉಚಿತವಾಗಿ ಪಡೆಯಬಹುದಾಗಿರುತ್ತದೆ.
3. ಎನ್.ಪಿ.ಎಸ್. ಲೈಟ್ ಸ್ವಾವಲಂಬನ್ ಪಿಂಚಣಿ ಯೋಜನೆಯಡಿ ವಂತಿಕೆದಾರರ ನೋಂದಣಿ, ವಂತಿಕೆ ಸಂಗ್ರಹಣೆ, ಪ್ರಾನ್ ಕಾರ್ಡ್ ವಿತರಣೆ, ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಕೆಳಕಂಡ 5 ಖಾಸಗಿ ಸಂಸ್ಥೆಗಳನ್ನು ಫೆಸಿಲಿಟೇಟರ್‌ಗಳೆಂದು ಪರಿಗಣಿಸಲಾಗಿದೆ.
    1. ಅಲಂಕಿತ್ ಅಸ್ಸೈನ್‌ಮೆಂಟ್ ಲಿ.,
    2. ಇನ್ಸ್‌ಸ್ಟಿಟ್ಯೂಟ್ ಫಾರ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್.
    3. ಇನ್‌ವೆಸ್ಟ್‌ಮೆಂಟ್ ಇಂಡಿಯಾ ಮೈಕ್ರೋ ಪೆನ್ಷನ್ ಸಿಸ್ಟಮ್ ಪ್ರೈ ಲಿ.,
    4. ಐಎಲ್ & ಎಫ್‌ಎಸ್ ಸೆಕ್ಯೂರಿಟೀಸ್ ಸರ್ವೀಸಸ್ ಲಿ., ಸ್ಟಾಕ್ ಎಕ್ಸಚೇಂಜ್ ಟವರ್ಸ್.
    5. ಮೆ॥ ವೇ 2 ವೆಲ್ತ್ ಬ್ರೋಕರ್ಸ್ ಪ್ರೈ ಲಿ., (ಎ ಕಾಫಿ ಡೇ ವೆಂಚರ್)